ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಇಲಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER:
ದಿನಾಂಕ : DATE

### ಕಾಂಗ್ರೆಸ್‌ನ ಕೊಂಡಯ್ಯಗೆ ಸೋಲು | ಪರಿಷತ್ತಿನಲ್ಲಿ ಆಡಳಿತ ಪಕ್ಷಕ್ಕೆ ಬಲ

# ಜೆಡಿಎಸ್ ಬಲದಿಂದ ಬಿಜೆಪಿ ಪ್ರಾಣೇಶ್ ಉಪಸಭಾಪತಿ

**ವಿಕ ಸುದ್ದಿಲೋಕ** ಬೆಂಗಳೂರು

ನಿರೀಕ್ಷೆಯಂತೆಯೇ ಜೆಡಿಎಸ್ ಬೆಂಬಲದೊಂದಿಗೆ ಬಿಜೆಪಿ ಸದಸ್ಯ ಎಂ.ಕೆ. ಪ್ರಾಣೇಶ್ ವಿಧಾನ ಪರಿಷತ್‌ನ ಉಪಸಭಾಪತಿಯಾಗಿ ಆಯ್ಕೆಯಾದರು.

ಚುನಾವಣೆಯಲ್ಲಿ ಪ್ರಾಣೇಶ್ ಪರ 41, ಪ್ರತಿಸ್ಪರ್ಧಿ ಕಾಂಗ್ರೆಸ್‌ನ ಕೆ.ಸಿ.ಕೊಂಡಯ್ಯಗೆ 24 ಮತ ಚಲಾವಣೆಗೊಂಡವು. ನಿಗದಿಯಂತೆ ಸಭಾಪತಿ ಕೆ.ಪ್ರತಾಪ ಚಂದ್ರಶೆಟ್ಟಿ ಚುನಾವಣೆ ಪ್ರಕ್ರಿಯೆ ಕೈಗೆತ್ತಿಕೊಂಡು ಧ್ವನಿ ಮತಕ್ಕೆ ಹಾಕಲು ಮುಂದಾದರು. ಆಗ ಪ್ರತಿಪಕ್ಷ ಕಾಂಗ್ರೆಸ್‌ನವರು ಮತಕ್ಕೆ ಹಾಕಬೇಕು ಎಂದು ಆಗ್ರಹಿಸಿದರು. ಶಾಂತಿಯುತವಾಗಿ ಚುನಾವಣೆ ನಡೆಯಿತು. ಡಿ.15ರಂದು ಇದೇ ಮನೆಯಲ್ಲಿ ಗದ್ದಲ ನಡೆದಿತ್ತು.

**ಹಿರಿಯರ ಮಾರ್ಗದರ್ಶನ, ಕಿರಿಯರ ಸಲಹೆಯಂತೆ ಕಾರ್ಯನಿರ್ವಹಣೆ:** ಉಪ ಸಭಾಪತಿ ಎಂ.ಕೆ.ಪ್ರಾಣೇಶ್ ''ಆರ್‌ಎಸ್‌ಎಸ್ ಸಂಘಟನೆ, ಬಿಜೆಪಿ ನಂಟಿನಲ್ಲಿ ಬೆಳೆದಿರುವುದನ್ನು ನೆನಪಿಸಿಕೊಂಡು ಉಪಸಭಾಪತಿ ಹುದ್ದೆ ಬಯಸದೇ ಬಂದ ಭಾಗ್ಯ. 113 ವರ್ಷಗಳ ಇತಿಹಾಸವಿರುವ ಈ 'ಚಿಂತಕರ ಚಾವಡಿ'ಯಲ್ಲಿ ಹಿಂದಿನ ಕಹಿ ಘಟನೆಯನ್ನು ಮರೆತು ಕೆಲಸ ಮಾಡೋಣ. ಹಿರಿಯರ ಮಾರ್ಗದರ್ಶನ, ಕಿರಿಯರ ಸಲಹೆಯಂತೆ ಪ್ರಾಮಾಣಿಕತೆ ಮತ್ತು ನಿಷ್ಠೆಯಿಂದ ಕೆಲಸ ಮಾಡುತ್ತೇನೆ'' ಎಂದರು.



ಗ್ಯಾಲರಿಯಲ್ಲಿ ಪ್ರಾಣೇಶ್ ಕುಟುಂಬ.



ಪೀಠದಲ್ಲಿ ಪ್ರಾಣೇಶ್ ಆಸೀನ.

## ಪ್ರಾಣೇಶ್ ಪರ ಎದ್ದು ನಿಂತ ಕೊಂಡಯ್ಯ

ಚುನಾವಣೆ ವೇಳೆ ಪ್ರಾಣೇಶ್ ಪರವಾಗಿ ಇರುವವರು ಎದ್ದುನಿಲ್ಲಿ ಎಂದಾಗ, ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದ ಕೊಂಡಯ್ಯ ಆಕಸ್ಮಾತ್ ಎದ್ದು ನಿಂತು ಮುಜುಗರಕ್ಕೆ ಒಳಗಾಗಿ ಕುಳಿತುಕೊಂಡರು.

### ಸಂಕ್ಷಿಪ್ತ ಜೀವನ ಹಾದಿ

**ಚಿಕ್ಕಮಗಳೂರು:** ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್ ಸದಸ್ಯರಾಗಿದ್ದ ಎಂ.ಕೆ. ಪ್ರಾಣೇಶ್, ಮೂಡಿಗೆರೆ ತಾಲೂಕು ಮಾಕೋನಹಳ್ಳಿಯ ಕಾಳೇಗೌಡ ಮತ್ತು ರತ್ನಮ್ಮ ಅವರ ಮಗನಾಗಿ 1961 ನವೆಂಬರ್ 28ರಂದು ಜನಿಸಿದರು.

ಪದವಿ ವ್ಯಾಸಂಗ ಮಾಡಿದ್ದು, 1989ರಲ್ಲಿ ಬಿಜೆಪಿ ಸದಸ್ಯತ್ವ ಪಡೆದವರು. 1992ರಲ್ಲಿ ಕಾಶ್ಮೀರದ ಏಕತಾ ಯಾತ್ರೆಯಲ್ಲಿ ಭಾಗವಹಿಸಿದ್ದರು. 1991 ರಿಂದ 98ರವರೆಗೆ ಮೂಡಿಗೆರೆ ತಾಲೂಕು ಯುವ ಮೋರ್ಚಾ ಅಧ್ಯಕ್ಷ, 1994ರಿಂದ 2000ದವರೆಗೆ ಸ್ವತಃಸ್ಥಳಿ ಆಟೋ ಮಾಲೀಕರು ಮತ್ತು ಚಾಲಕರ ಸಂಘದ ಅಧ್ಯಕ್ಷ, 1998 ರಿಂದ 2001ರವರೆಗೆ ಬಿಜೆಪಿ ಜಿಲ್ಲಾ ಯುವ ಮೋರ್ಚಾ ಅಧ್ಯಕ್ಷರಾಗಿದ್ದರು. 2000-2005ರವರೆಗೆ ಜಿಲ್ಲಾ ಪಂಚಾಯಿತಿ ಸದಸ್ಯರಾಗಿದ್ದ ಪ್ರಾಣೇಶ್, 2001 ರಿಂದ 2004ರವರೆಗೆ ಬಿಜೆಪಿ ಜಿಲ್ಲಾಧ್ಯಕ್ಷರಾಗಿ ಜಿಲ್ಲೆಯಲ್ಲಿ ಕಾಂಗ್ರೆಸ್ ಭದ್ರಕೋಟೆ ಭೇದಿಸಿ ಕೇಸರಿ ಪತಾಕೆ ಹಾರಿಸುವಲ್ಲಿ ಯಶಸ್ವಿಯಾಗಿದ್ದರು. 2004 ರಿಂದ 2007ರವರೆಗೆ ಬಿಜೆಪಿ ರಾಜ್ಯ ಸಮಿತಿ ಸದಸ್ಯರಾಗಿದ್ದು, 2007ರಿಂದ 2011ರವರೆಗೆ ಪುನಃ ಬಿಜೆಪಿ ಜಿಲ್ಲಾಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದರು.

2010 ರಿಂದ 2013ರವರೆಗೆ ಅರಣ್ಯ ವಸತಿ ನಿಗಮದ ಅಧ್ಯಕ್ಷರಾಗಿದ್ದ ಪ್ರಾಣೇಶ್, 2016ರಲ್ಲಿ ವಿಧಾನ ಪರಿಷತ್‌ಗೆ ಆಯ್ಕೆಯಾಗಿದ್ದರು.

ಪ್ರಜಾಪ್ರಭುತ್ವದ ಮೌಲ್ಯವನ್ನು ಸಭಾಪತಿ ಎತ್ತಿ ಹಿಡಿಯುವಂತೆ ನಿರ್ವಹಿಸಿದ್ದಾರೆ. ನೂತನ ಉಪಸಭಾಪತಿ ಪರಿಷತ್ ಘನತೆ ಎತ್ತಿ ಹಿಡಿಯಲಿ.

**-ಕೋಟಾ ಶ್ರೀನಿವಾಸ ಪೂಜಾರಿ** ಸಭಾನಾಯಕ

ಸದನದ ಗೌರವ, ಮಹತ್ವ ಎತ್ತಿ ಹಿಡಿದು ಜನರ ಧ್ವನಿಯಾಗಿ ಕೆಲಸ ಮಾಡಬೇಕಿದೆ.

**-ಬಸವರಾಜ ಬೊಮ್ಮಾಯಿ** ಗೃಹ ಸಚಿವ

ನಡೆದು ಹೋದ ಘಟನೆಯನ್ನು ಮರೆಯುವುದು ಒಳ್ಳೆಯದು. ಪ್ರತಿ ವಿಧೇಯಕಗಳನ್ನು ಚರ್ಚೆ ನಂತರ ಅಂಗೀಕರಿಸಬೇಕು.

**-ಎಸ್.ಆರ್. ಪಾಟೀಲ್** ಪ್ರತಿಪಕ್ಷ ನಾಯಕ

ಸದನದ ಗೌರವ ಕೀರ್ತಿಯನ್ನು ಎತ್ತಿಹಿಡಿಯುವ ಕೆಲಸವನ್ನು ನೂತನ ಉಪಸಭಾಪತಿ ಮಾಡಲಿ.

**-ಬಸವರಾಜ ಹೊರಟ್ಟಿ** ಜೆಡಿಎಸ್ ನಾಯಕ

ಡಿ.15ರ ಘಟನೆ ದುರದೃಷ್ಟಕರ. ಇಂದು ಶಾಂತಿಯುತವಾಗಿ ಚುನಾವಣೆ ಮುಗಿದಿದೆ. ಇದೇ ಗಣತಂತ್ರದ ಸೌಂದರ್ಯ.

**-ಎಚ್. ವಿಶ್ವನಾಥ್** ಹಿರಿಯ ಸದಸ್ಯ